ಬಿಡಲಾಗದ ಸಂಬಂಧಗಳ ಬದುಕು, ಮೋರಿಯಲ್ಲಿ ಕಟ್ಟಿ ನಿಂತ ನೀರ ತಳದಲ್ಲಿ ಹುದುಗಿರುವ ವೇದನೆಯಂತೆ ಅನ್ನಿಸಿತ್ತು. ಆಗಾಗ ದುಃಖದ ದುರ್ನಾತ ಗುಳ್... ಗುಳ್ ಎಂದು ಗುಳ್ಳೆಯೊಡೆಯುತ್ತಿತ್ತು.

ಸಲಿಂಗಕಾಮವನ್ನು, ಮದುವೆಗಳನ್ನು ಅಧಿಕೃತವಾಗಿ ಒಪ್ಪಿಕೊಳ್ಳುವ ಇಂಗ್ಲಿಷರ ನಾಡಲ್ಲಿ ಮಿ.ಕೆ. ನಿರಾಳವಾಗಿದ್ದರೂ, ಸುಖವಾಗೇನೂ ಇರಲಿಲ್ಲ.

ಅವತ್ತೊಂದು ದಿನ ತನ್ನ ಸಂಗಾತಿಯನ್ನು ಮತ್ತೊಬ್ಬ ಹಾರಿಸಿಕೊಂಡು ಹೋದದ್ದನ್ನು ಹೇಳಿ ಅತ್ತಿದ್ದ. ಇನ್ನೊಂದು ದಿನ ಮೂರು ತಿಂಗಳು ಅವನೊಂದಿಗೇ ಬಂದು ಇರಲು ಒಪ್ಪಿದ್ದ ಇನ್ನೊಬ್ಬ ಸಂಗಾತಿ ಇದ್ದಕ್ಕಿದ್ದಂತೆ ಇವನ ಪರ್ಸಿನಲ್ಲಿ ಇದ್ದ ಹಣದೊಂದಿಗೆ ಹೇಳದೆ ಕೇಳದೆ ಮನೆ ಬಿಟ್ಟಿದ್ದ. ಮಗದೊಬ್ಬ ಇವನೊಡನೆ ಬರಲು ಒಪ್ಪಿ ಇವನೊಡನೆ ಬದುಕಲು ಶುರು ಮಾಡಿದ ಒಂದು ವಾರಕ್ಕೆ, ಇವನು ಕರೆತಂದ ಸಂಗಾತಿಯ ಹಳೆಯ ಗೆಳೆಯ ಇವನ ಮನೆಗೇ ಬಂದು ಜಗಳವಾಡಿ ಹೋಗಿದ್ದ. ಆಗೆಲ್ಲ ಅವನು ಹೇಳುತ್ತಿದ್ದ ಈ ಎಲ್ಲ ಕತೆಗಳನ್ನು ಕೇಳಿ ಸಮಾಧಾನ ಹೇಳುತ್ತಿದ್ದೆ. ಕೆಲವೊಮ್ಮೆ ಸುಮ್ಮನೆ ಕೇಳಿಸಿಕೊಂಡು ಅವನ ಎದೆ ಭಾರ ಕಡಿಮೆ ಮಾಡುತ್ತಿದ್ದೆ. ಗೇ ಕ್ಲಬ್‌ಗಳಲ್ಲಿ ಸೇರುತ್ತಿದ್ದ ಹಲವರ ಜೊತೆ ಸಖ್ಯ ಬೆಳಸಲು ಪ್ರಯತ್ನಿಸುತ್ತಿದ್ದನಾದರೂ ಕೆಲವರಿಗೆ ಇವನ ಬಗ್ಗೆ ಆಸಕ್ತಿಯಿರಲಿಲ್ಲ.

ಹಲವರಿಗೆ ಇರುವ, ಕೆಲವು ಬಿಟ್ಟೂ ಬಿಡಲಾಗದ ಗೀಳುಗಳು ಇವನ ವೀಕ್‌ನೆಸ್ ಆಗಿದ್ದವು. ಅಪ್ಪಿ ತಪ್ಪಿಯೂ ತನ್ನ ತಲೆ ಕೂದಲನ್ನು ನಾಲ್ಕು ಮಿಲಿ ಮೀಟರಿಗಿಂತ ಹೆಚ್ಚು ಬೆಳೆಯಲು ಬಿಡುತ್ತಿರಲಿಲ್ಲ. ತನ್ನ ದೇಹದ ತೂಕ, ಗಾತ್ರ ಮತ್ತು ಆಕಾರದ ಬಗ್ಗೆ ಅವನು ತೋರಿಸುತ್ತಿದ್ದ ಕಾಳಜಿ ನರ್ಸ್‌ಗಳಾದ ಲೋರ, ಶಾಂಟೆಲ್ ಮತ್ತು ಕೆರ್ರೀಗೆ ಮೋಜಿನ ವಿಚಾರವಾಗಿತ್ತು. ಹೊಕ್ಕುಳು ಕಾಣುವಂತಹ ಟಿ–ಶರ್ಟ್‌ಗಳನ್ನು ಧರಿಸುತ್ತ ಬರುವವನಿಗೆ ಈ ಜಗತ್ತಿನ ಮೇಲೆ ಸಿಟ್ಟಿದ್ದಂತೆ ನನಗೆ ಅನ್ನಿಸುತ್ತಿತ್ತು. ನನ್ನ ಬಗ್ಗೆ ಆಗೀಗ ಈರ್ಷ್ಯೆಯ ಮಾತುಗಳನ್ನು ಇತರರೊಂದಿಗೆ ಹಂಚಿಕೊಂಡ ಅಂತ ಗೊತ್ತಾದಾಗಲೆಲ್ಲ ನನ್ನ ಬಗ್ಗೆ ಅವನಿಗೇನು ಗೊತ್ತು? ಗೊತ್ತಿದ್ದರೆ ಮರುಕ ಪಡುತ್ತಿದ್ದನೇನೋ ಎಂದೆನಿಸಿ ಮನಸ್ಸಿನಲ್ಲೇ ಕ್ಷಮಿಸಿ ಬಿಡುತ್ತಿದ್ದೆ.

★★★

ಅವತ್ತೊಂದು ದಿನ ಊಟದ ಸಮಯಕ್ಕೆ ಸರಿಯಾಗಿ ಮಿ.ಕೆ. ಗದ್ದಲ ಮಾಡುತ್ತಿದ್ದ; ನರ್ಸ್‌ಗಳೆಲ್ಲ ಅವನ ಸುತ್ತ ಗುಂಪು ಕಟ್ಟಿದ್ದರು. ಅವನ ಕಣ್ಣುಗಳು ಮತ್ತಿನಲ್ಲಿರುವಂತೆ ಸುಖವನ್ನು ಸೂಸುತ್ತಿದ್ದವು. ನಾನೂ ಅವರೊಡನೆ ಸೇರಿಕೊಂಡೆ. ಲೋರ ಅವನ ಫೋನ್ ಕಿತ್ತುಕೊಂಡು ನೋಡಲು ನನ್ನ ಕೈಗಿಟ್ಟಳು.

ಅದರಲ್ಲಿ ಅತ್ಯಂತ ಸ್ಫುರದ್ರೂಪಿ ಗಂಡಸಿನ ಭಾವಚಿತ್ರವಿತ್ತು. ಕಪ್ಪು ಬಣ್ಣದ ಗೀರು ಮೀಸೆ ಇಳಿದು ದಾಡಿಯಾಗಿ ಮುಂದುವರೆದು ಟ್ರಿಮ್ಮಾಗಿ ಕೂತಿತ್ತು. ಅವನ ಎದೆ ಮತ್ತು ತೋಳುಗಳ ಮಾಂಸದ ಉಬ್ಬುಗಳು ಮೂರ್ಛೆ ಬರಿಸುವಷ್ಟು ಸದೃಢವಾಗಿದ್ದವು. ಮೂಗು, ಮುಖ, ತುಟಿಗಳು ಎಲ್ಲವೂ ಚಿತ್ರ ಬರೆದಂತಿದ್ದವು. ತಲೆಯ ತುಂಬ ತುಂಬಿದ್ದ ಕಡುಗಪ್ಪು ಕೂದಲನ್ನು ನೀಟಾಗಿ ಕತ್ತರಿಸಿಕೊಂಡಿದ್ದ. ಇಂಗ್ಲಿಷಿನವರಂತೆ ಕಾಣಲಿಲ್ಲ. ಇಟಾಲಿಯನ್ ಅಥವಾ ಸ್ಪ್ಯಾನಿಷ್ ಮೂಲದ ತಾಯಿ ಅಥವಾ ತಂದೆಯಿರಬಹುದು. ಅವನ ಸಾಮಾಜಿಕ ಜಾಲತಾಣಗಳ ಪುಟಗಳಲ್ಲಿ ಕಾಮನೆಗಳನ್ನು ಕೆರಳಿಸುವ ಭಂಗಿಯ ಅನೇಕ ಚಿತ್ರಗಳಿದ್ದವು. ಅವು ತನ್ನನ್ನು ತಾನು ಹೊಗಳಿಕೊಳ್ಳುವಂತಹ ಚಿತ್ರಗಳು. ಅವನೊಡನಿದ್ದ ಹಲವರಲ್ಲಿ ಯಾರೂ ಇವನ ರೂಪಿಗೆ ಸಮನಿರಲಿಲ್ಲ. ಮಿ.ಕೆ. ಕೂಡ. ಸುಂದರವಾಗಿರುವವರನ್ನು ಮೆಚ್ಚಿಕೊಳ್ಳಲು ಸುಂದರವಾಗೇನೂ ಇರಬೇಕಿಲ್ಲವಲ್ಲ?

"ಈಸ್ ಹಿ ಬೈಸೆಕ್ಶುಯಲ್ ಬೈ ಎನಿ ಚಾನ್ಸ್?" (ಅವನು ದ್ವಿಲಿಂಗಿಯಾಗಿರುವ ಸಾಧ್ಯತೆಗಳಿವೆಯಾ?)